ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ, ಗುಬ್ಬಿ

ಸಿ.ಸಿ.ನಂ.1622/2024

| | | | |
|---|---|---|---|
| ಹೆಸರು | : | ಶಿಲ್ಪ | ಪಿ.ಡಬ್ಲ್ಯೂ :2 |
| ಗಂಡನ ಹೆಸರು | : | ಹರ್ಷಿತ್ | ಸಿ.ಡಬ್ಲ್ಯೂ :1 |
| ವಯಸ್ಸು | : | 25 ವರ್ಷ | |
| ಉದ್ಯೋಗ | : | ಗೃಹಿಣಿ | |
| ವಾಸಸ್ಥಳ | : | ಮದನಘಟ್ಟ | |

ಸಾಕ್ಷಿಯನ್ನು ದಿಃ08-06-2026 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದಃ

ಚಾಸಾ -2 ನನ್ನ ಗಂಡ , ಚಾಸಾ -3 ನನ್ನ ಅತ್ತೆ , ಚಾಸಾ -4 ನನ್ನ ಮಾವ , ಆರೋಪಿತರು ಗೊತ್ತು ಅವರು ನಮ್ಮ ಗ್ರಾಮದವರು .

ಸಾಕ್ಷಿಗೆ ದೂರನ್ನು ತೋರಿಸಲಾಗಿ ಅದರಲ್ಲಿ ತಮ್ಮ ಸಹಿಯನ್ನು ಗುರುತಿಸಿದ್ದಾರೆ ಅದನ್ನು ನಿಪಿ -2 ಎಂದು ಸಾಕ್ಷಿ ಸಹಿಯನ್ನು ನಿಪಿ -2 (ಎ) ಎಂದು ಗುರುತಿಸಲಾಯಿತು.

ಸುಮಾರು ಎರಡು ವರ್ಷದ ಹಿಂದೆ ಒಂದು ದಿನ ಠಾಣೆಯ ಮುಂಭಾಗ ಹೋಗುತ್ತಿದ್ದ ಸಮಯ ಪೊಲೀಸರು ನಿಪಿ -2 ಕ್ಕೆ ನನ್ನ ಸಹಿ ಪಡೆದಿದ್ದಾರೆ . ನಿಪಿ -2 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ . ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ . ಸಾಕ್ಷಿಯು ನ್ಯಾಯಾಲಯದಲ್ಲಿ ಹಾಜರುಪಡಿಸಿರುವ ಮು ಮಾ -1 ನ್ನು ನೋಡಿ ಅದರ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ತಿಳಿಸಿದ್ದಾರೆ .ಈ ಪ್ರಕರಣಕ್ಕೆ ಸಂಬಂಧಿಸಿ ಪೊಲೀಸರ ಸಮಕ್ಷಮ ನಾನು ಯಾವುದೇ ಹೇಳಿಕೆ ನೀಡಿಲ್ಲ .

(ಈ ಹಂತದಲ್ಲಿ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀಸವಾಲು ಮಾಡಲು ಪ್ರಾಜ್ಞ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು, ಅದರಂತೆ ಅನುಮತಿ ನೀಡಲಾಯಿತು)

ಪಾಟೀಸವಾಲುಃ ಸ ಸ ಅ ರವರಿಂದಃ-

ಸಾಕ್ಷಿಗೆ ನಿಪಿ -2 ರ ಮತ್ತು ಅವರ ಮುಂದುವರೆದ ಹೇಳಿಕೆಯಲ್ಲಿನ ವಿವರಗಳನ್ನು ಓದಿ ತಿಳಿಸಲಾಗಿ ಅವುಗಳನ್ನು ಅಲ್ಲಗೆಳೆದಿದ್ದಾರೆ . ಈ ಪ್ರಕರಣದಲ್ಲಿ ಆರೋಪಿತರಿಗೆ ಅನುಕೂಲವಾಗಲೆಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ . ಸಾಕ್ಷಿಯು ಅಲ್ಲಗಳೆದ ಮುಂದುವರೆದ ಹೇಳಿಕೆಯನ್ನು ನಿಪಿ-3 ಎಂದು ಗುರುತಿಸಲಾಯಿತು.

ಪಾಟೀಸವಾಲು:  ಆರೋಪಿ ಪರ  ವಕೀಲರಿಂದಃ- ಇಲ್ಲ ಎಂದು ತಿಳಿಸಿದ್ದಾರೆ .

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿದೆ ,  ಸರಿ ಇದೆ ಎಂದು ಒಪ್ಪಿದ್ದಾರೆ.

SD/-
(ಅನುಪಮ.ಡಿ )
ಪ್ರಧಾನ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ, ಗುಬ್ಬಿ.